ಆಯುಕ್ತರು
ಕಾರ್ಮಿಕ ಆಯುಕ್ತರ ಕಛೇರಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್
ಬನ್ನೇರುಘಟ್ಟರಸ್ತೆ, ಬೆಂಗಳೂರು - 560 029
ಕಛೇರಿ: 080 2975 3078
ಇಮೇಲ್ : labour.commissioner42@gmail.com

ಸಂಖ್ಯೆ : ಪಿ&ಎಸ್/ಎನ್ಎಫ್ಹೆಚ್/ಸಿಆರ್-3/2024-25 ದಿನಾಂಕ: 7-11-2024

# ಕಛೇರಿ ಆದೇಶ

ವಿಷಯ: General Election to Legislative Assembly of Maharashtra, 2024-Paid Holiday-reg

ಉಲ್ಲೇಖ:
1. Office of the Chief Electrol Officer, Karnataka letter No:DPAR 143 CHUVISA 2024 Dated:04-11-2024
2. Office of the Chief Electrol Officer, Maharashtra Sate letter Dated:29-10-2024
3. Election Commission Of India: Letter No:78/EPS/2024 Dated:16-10-2024

= = =

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಉಲ್ಲೇಖಿತ ಪತ್ರದಲ್ಲಿ ಭಾರತ ಚುನಾವಣಾ ಆಯೋಗವು 2024ರ ವಿಧಾನಸಭಾ ಚುನಾವಣೆಯನ್ನು ಮಹಾರಾಷ್ಟ್ರ ರಾಜ್ಯದಲ್ಲಿ ದಿನಾಂಕ:20-11-2024 (ಬುಧವಾರ) ರಂದು ನಡೆಯಲಿದ್ದು, ಕರ್ನಾಟಕದಲ್ಲಿ ಕೆಲಸದ ನಿಮಿತ್ತ ವಲಸೆ ಬಂದಿರುವ ಮಹಾರಾಷ್ಟ್ರ ರಾಜ್ಯದಲ್ಲಿ ಮತಚಲಾಯಿಸಲು ಹಕ್ಕಿರುವ ಪ್ರಜೆಗಳಿಗೆ ಮತದಾನದ ದಿನಾಂಕದಂದು ವೇತನ ಸಹಿತ ರಜೆ ನೀಡುವಂತೆ ಸೂಚಿಸಿರುತ್ತಾರೆ.

ಪ್ರಜಾ ಪ್ರತಿನಿಧಿ ಕಾಯ್ದೆ-1951 ರ ಕಲಂ-135(ಬಿ) ಹಾಗೂ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಹಾಗೂ ಹಬ್ಬದ ರಜಾ ದಿನಗಳು) ಕಾಯ್ದೆ-1963 ಕಲಂ 3-ಎ ಪ್ರಕಾರ ಉದ್ಯೋಗದಾತರು ಅಥವಾ ಮಾಲೀಕ ವರ್ಗದವರು ತಮ್ಮ ಕಾರ್ಮಿಕರಿಗೆ ಅ ವರು ಮತದಾನವನ್ನು ಹೊಂದಿರುವ ಸ್ಥಳದಲ್ಲಿ ನಡೆಯುವ ಮತದಾನದ ದಿನಾಂಕಗಳನ್ನು ಅವರಿಂದ ತಿಳಿದುಕೊಂಡು ಮತದಾನದ ದಿನಾಂಕದಂದು ಮತದಾನ ಮಾಡಲು ವೇತನ ಸಹಿತ ರಜೆಯನ್ನು ಮಂಜೂರು ಮಾಡುವುದು ಕಡ್ಡಾಯವಾಗಿರುತ್ತದೆ ಎಂದು ಎಲ್ಲಾ ಉದ್ಯೋಗದಾತರಿಗೆ ಮನವರಿಕೆ ಮಾಡಿಕೊಡಲು ಈ ಮೂಲಕ ಸೂಚಿಸಲಾಗಿದೆ.

ಇಲ್ಲವಾದಲ್ಲಿ ಮೇಲಿನ ಕಾಯ್ದೆಗಳ ಕಲಂಗಳ ಪ್ರಕಾರ ಕಾನೂನುರೀತ್ಯ ಕ್ರಮ ಜರುಗಿಸಬೇಕಾಗುತ್ತದೆ ಎಂಬ ಅಂಶವನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಎಲ್ಲಾ ಉದ್ಯೋಗದಾತರಿಗೆ ಅಥವಾ ಮಾಲೀಕವರ್ಗದವರಿಗೆ ಮನದಟ್ಟು ಮಾಡಿಕೊಡಲು ಈ ಮೂಲಕ ಸೂಚಿಸಿದೆ.

Gopalk
ಆಯುಕ್ತರು
ಕಾರ್ಮಿಕ ಇಲಾಖೆ

ಇವರಿಗೆ,
1. ಉಪ ಕಾರ್ಮಿಕ ಆಯುಕ್ತರು, ಬೆಳಗಾವಿ ಪ್ರಾದೇಶಿಕ ಬೆಳಗಾವಿ.
2. ಉಪ ಕಾರ್ಮಿಕ ಆಯುಕ್ತರು, ಕಲಬುರಗಿ ಪ್ರಾದೇಶಿಕ, ಕಲಬುರಗಿ
3. ಸಹಾಯಕ ಕಾರ್ಮಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ
4. ಸಹಾಯಕ ಕಾರ್ಮಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.
5. ಕಾರ್ಮಿಕ ಅಧಿಕಾರಿ, ಉಪವಿಭಾಗ-01 ಮತ್ತು 02 ಬೆಳಗಾವಿ.
6. ಕಾರ್ಮಿಕ ಅಧಿಕಾರಿ, ಉಪವಿಭಾಗ, ವಿಜಯಪುರ
7. ಕಾರ್ಮಿಕ ಅಧಿಕಾರಿ, ಉಪವಿಭಾಗ, ಕಲಬುರಗಿ.
8. ಕಾರ್ಮಿಕ ಅಧಿಕಾರಿ, ಉಪವಿಭಾಗ, ಬೀದರ್.